ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

# ಸ್ಪೀಕರ್ ಹುಕುಂ–ಸರ್ಕಾರಕ್ಕೆ ಪೇಚು

**ಸಂ.ಕ.ಸಮಾಚಾರ ಬೆಂಗಳೂರು:** ವಿಧಾನ ಪರಿಷತ್ ಉಪ ಸಭಾಪತಿ ಧರ್ಮೇಗೌಡ ಅವರ ಆತ್ಮಹತ್ಯೆ ಪ್ರಕರಣ ಕುರಿತಂತೆ ಸ್ವತಂತ್ರ ಸಂಸ್ಥೆಯಿಂದ ಉನ್ನತ ಮಟ್ಟದ ತನಿಖೆ ನಡೆಯಬೇಕು ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿರುವುದನ್ನು ರಾಜ್ಯ ಸರ್ಕಾರ ಪಾಲಿಸುವುದೇ?

ಹೀಗೊಂದು ಪ್ರಶ್ನೆ ಈಗ ಎದುರಾಗಿದೆ. ಲೋಕಸಭೆಯ ಯಾವುದೇ ಸದನದ ಅಧ್ಯಕ್ಷರು ಅಥವಾ ಯಾವುದೇ ರಾಜ್ಯದ ಶಾಸನಸಭೆಯ ಹಾಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷರು ಆತ್ಮಹತ್ಯೆ ಮಾಡಿಕೊಂಡಿರುವ ದೇಶದ ಮೊದಲ ಘಟನೆ ಇದಾಗಿದೆ. ಅಷ್ಟೇ ಅಲ್ಲ, ಲೋಕಸಭೆಯ ಹಾಲಿ ಸ್ಪೀಕರ್ ಯಾವುದೇ ವ್ಯಕ್ತಿಯ ಸಾವಿನ ಬಗೆಗೆ ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿರುವ ಪ್ರಕರಣ ಕೂಡ ಇದೇ ಮೊದಲು. ಹೀಗಾಗಿ ರಾಜ್ಯ ಸರ್ಕಾರ ಲೋಕಸಭೆಯ ಸ್ಪೀಕರ್ ಹೇಳಿಕೆಯನ್ನು ಆಗ್ರಹ ಎಂದು ಭಾವಿಸಬೇಕೋ ಅಥವಾ ಆದೇಶ ಎಂದು ಪಾಲಿಸಬೇಕೋ ಎಂಬ ಗೊಂದಲ ಉಂಟಾಗಿದೆ.

ಉಪಸಭಾಪತಿ ಧರ್ಮೇಗೌಡ ಅವರ ಸಾವಿಗೆ ವೈಯಕ್ತಿಕ ಕಾರಣ ಎಂದು ಗೃಹ ಸಚಿವರೂ ಸೇರಿದಂತೆ ರಾಜ್ಯದ ಪೊಲೀಸ್ ಇಲಾಖೆಯ ಯಾವುದೇ ಅಧಿಕಾರಿ ಈ ತನಕ ಹೇಳಿಕೆ ಕೊಟ್ಟಿಲ್ಲ. ಇತ್ತೀಚೆಗೆ ವಿಧಾನ ಪರಿಷತ್‌ನಲ್ಲಿ ಸಭಾಪತಿಗಳ ವಿರುದ್ಧದ ನಿರ್ಣಯ ಮಂಡನೆ ವೇಳೆ ಉಂಟಾದ ಗದ್ದಲದಲ್ಲಿ

ಪುಟ 05


ಉಪಸಭಾಪತಿ ಮರ್ಯಾದೆ ಹತ್ಯೆ

- ಧರ್ಮೇಗೌಡ ಆತ್ಮಹತ್ಯೆ ಪ್ರಕರಣದಲ್ಲಿ ಬಿರ್ಲಾ ಹೇಳಿಕೆ
- ಉನ್ನತಮಟ್ಟದ ತನಿಖೆಗೆ ಮುಂದಾಗದ ಸರ್ಕಾರ
- ಸ್ಪೀಕರ್ ಹೇಳಿಕೆ ಆದೇಶವೇ? ಆಗ್ರಹವೇ?
- ಬಿರ್ಲಾ ಹೇಳಿಕೆಗೆ ಕಾಗೇರಿ ಸಹಮತ

“ಲೋಕಸಭಾ ಸ್ಪೀಕರ್ ನೀಡಿರುವ ಹೇಳಿಕೆಗೆ ನನ್ನ ಸಂಪೂರ್ಣ ಬೆಂಬಲ ಇದೆ. ಧರ್ಮೇಗೌಡರ ನಿಧನಕ್ಕೆ ನಿಜವಾದ ಕಾರಣ ರಾಜ್ಯದ ಜನತೆಗೆ ತಿಳಿಯಬೇಕು. ಲೋಕಸಭೆ ಸ್ಪೀಕರ್ ನೀಡಿರುವ ಹೇಳಿಕೆಯನ್ನು ಸರ್ಕಾರ ಪಾಲಿಸುತ್ತದೆ ಎಂಬ ವಿಶ್ವಾಸವಿದೆ. ಸತ್ಯಾಸತ್ಯತೆ ಜನರಿಗೆ ತಿಳಿಯದಿದ್ದರೆ ಪ್ರಜಾಪ್ರಭುತ್ವದಲ್ಲಿ ಶಾಸನಸಭೆಗಳ ಘನತೆಗೆ ಧಕ್ಕೆ ಬರುತ್ತದೆ. ಉಪಸಭಾಪತಿ ಉನ್ನತ ಹುದ್ದೆ. ಹಾಗಾಗಿ ತನಿಖೆ ನಡೆಯಲೇಬೇಕು.

■ **ವಿಶ್ವೇಶ್ವರ ಹೆಗಡೆ ಕಾಗೇರಿ** | ವಿಧಾನಸಭೆ ಸ್ಪೀಕರ್

“ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ನೀಡಿರುವ ಹೇಳಿಕೆ ಗಮನಿಸಿದ್ದೇನೆ. ಅವರು ಹೇಳಿಕೆ ನೀಡಿದ ಮೇಲೆ ಅದನ್ನು ಸರ್ಕಾರ ಪರಿಗಣಿಸಲೇಬೇಕಾಗುತ್ತದೆ. ಇಂತಹ ಘಟನೆ ಇದೇ ಮೊದಲು. ಆದ್ದರಿಂದ ಲೋಕಸಭೆ ಸ್ಪೀಕರ್ ಕೂಡ ಇಂತಹ ಹೇಳಿಕೆ ನೀಡಿರುವುದು ಇದೇ ಮೊದಲು. ಅವರ ಹೇಳಿಕೆ ವೈಯಕ್ತಿಕ ಎಂದು ಭಾವಿಸಲು ಬರುವುದಿಲ್ಲ. ಅವರು ಸ್ಪೀಕರ್ ಆಗಿರುವುದರಿಂದ ಅವರ ಹುದ್ದೆಯಿಂದಲೇ ಹೇಳಿರುವುದು ಎಂದು ಪರಿಗಣಿಸಬೇಕು ಎಂಬುದು ನನ್ನ ನಿಲುವು.

■ **ಕೆ.ಪ್ರತಾಪ್‌ಚಂದ್ರ ಶೆಟ್ಟಿ** | ವಿಧಾನ ಪರಿಷತ್ ಸಭಾಪತಿ

“ವಿಧಾನಸಭೆಯ ಅಧ್ಯಕ್ಷರು ಕೂಡ ತನಿಖೆ ನಡೆಯಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅವರ ಹೇಳಿಕೆಗೆ ನನ್ನ ಸಂಪೂರ್ಣ ಬೆಂಬಲ ಇದೆ. ಪ್ರಕರಣದಲ್ಲಿ ಉನ್ನತಮಟ್ಟದ ತನಿಖೆ ಆಗಬೇಕು. ಧರ್ಮೇಗೌಡರು ಸಂವಿಧಾನಿಕ ಹುದ್ದೆಯಲ್ಲಿ ಇದ್ದವರು. 1998ರಿಂದಲೂ ಅವರು ನನಗೆ ಸ್ನೇಹಿತರು. ಹಿರಿಯ ರಾಜಕಾರಣಿ ಕೂಡ. ಅವರ ಸಾವಿಗೆ ನ್ಯಾಯ ಸಿಗಬೇಕು. ಸತ್ಯ ಹೊರಬರಬೇಕು. ಸಾರ್ವಜನಿಕ ಬದುಕಿನಲ್ಲಿ ಇಂತಹ ಘಟನೆ ನಡೆಯಬಾರದಾಗಿತ್ತು. ಆ ಬಗ್ಗೆ ನನಗೆ ತುಂಬಾ ಖೇದವಿದೆ.

■ **ವಿಶ್ವನಾಥ ಮಾಮನಿ** | ವಿಧಾನಸಭೆ ಡೆಪ್ಯೂಟಿ ಸ್ಪೀಕರ್

4

# ಸ್ಪೀಕರ್ ಹುಕುಂ ಸರ್ಕಾರಕ್ಕೆ ಪೇಚು

11/21

ಮೊದಲ ಪುಟದಿಂದ...

ಉಪಸಭಾಪತಿ ಧರ್ಮೇಗೌಡ ಅವರನ್ನು ಅಕ್ಷರಶಃ ಸಭಾಪತಿ ಪೀಠದಿಂದ ಅನಾಮತ್ತಾಗಿ ಎತ್ತಿ ಸದನದ ಅಂಗಳಕ್ಕೆ ಹೊತ್ತು ಹಾಕಲಾಯಿತು.

ಈ ಘಟನೆಯಿಂದ ತೀವ್ರ ಅವಮಾನಕ್ಕೆ ಒಳಗಾಗಿದ್ದ ಧರ್ಮೇಗೌಡ ಅವರು ಈ ಬಗ್ಗೆ ಆಪ್ತೇಕರ ಮುಂದೆ ಹೇಳಿಕೊಂಡಿದ್ದರು. ಪರಿಷತ್‌ನಲ್ಲಿ ಆದ ಅವಮಾನದ ಘಟನೆಯ ಬಳಿಕ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ, ಪರಿಷತ್‌ನ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ಸೇರಿದಂತೆ ಹಲವಾರು ಮುಖಂಡರು ಧರ್ಮೇಗೌಡ ಅವರಿಗೆ ಧೈರ್ಯ ತುಂಬಿದ್ದರು. ಆದಾಗ್ಯೂ ಕೂಡ ಧರ್ಮೇಗೌಡ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಬಗ್ಗೆ ಡೆತ್‌ನೋಟ್ ಬರೆದಿಟ್ಟಿದ್ದಾರೆ ಎಂದು ಹೇಳಲಾಗುತ್ತಿದ್ದರೂ ಅದರಲ್ಲಿರುವ ನಿಜಾಂಶ ಈ ತನಕ ಬಹಿರಂಗವಾಗಿಲ್ಲ. ಕೆಲ ಮೂಲಗಳ ಪ್ರಕಾರ, ಡೆಟ್ ನೋಟ್ ನಾಶಪಡಿಸಲಾಗಿದೆ ಎಂಬ ಹದಂತಿಯೂ ಇದೆ. ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಧರ್ಮೇಗೌಡರ ಪ್ರಕರಣವನ್ನು ಪೊಲೀಸರು ತನಿಖೆ ಮಾಡುತ್ತಿದ್ದಾರೆ. ವರದಿ ಬಂದ ನಂತರ ಮುಂದಿನ ಕ್ರಮ ಎನ್ನುತ್ತಿದ್ದಾರೆ. ಲೋಕಸಭೆಯ ಸ್ಪೀಕರ್ ಹೇಳಿಕೆಯ ನಂತರ ಬೊಮ್ಮಾಯಿ ಈ ಹೇಳಿಕೆ ನೀಡಿರುವುದರಿಂದ ಸ್ಪೀಕರ್ ಹೇಳಿಕೆಯನ್ನು ಸರ್ಕಾರ ಅನುಸರಿಸುವುದು ಅನುಮಾನ ಎನ್ನಲಾಗುತ್ತಿದೆ.